**ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 7018/2022

ಪಿ.ಡಬ್ಲ್ಯೂ : 4 ಸಿ.ಡಬ್ಲ್ಯೂ 4

| | |
|---|---|
| ಸಾಕ್ಷಿದಾರರ ಹೆಸರು | : ಶಂಕ್ರೆಪ್ಪ ಸಾಸಾಬಾಳ |
| ತಂದೆಯ ಹೆಸರು | : ಮಲ್ಲಪ್ಪ |
| ವಯಸ್ಸು | : 45 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸಸ್ಥಳ | : ನಿವಾಳಖೇಡ |
| ಸಮಯ | : 4.00 |

ಸಾಕ್ಷಿಗೆ ಇಂದು ದಿನಾಂಕಃ 14.11.2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 1 ನನ್ನ ತಮ್ಮ. ಚಾ ಸಾ 5 ಚಾ ಸಾ 1 ರವರ ಹೆಂಡತಿ. ಚಾ ಸಾ 6 ರಿಂದ 8 ರವರ ಪರಿಚಯ ಇಲ್ಲ. 2-3 ವರ್ಷಗಳ ಹಿಂದೆ ನಾನು ಚಾ ಸಾ 1,5 ರವರು ದೇವರ ಹಿಪ್ಪರಗಿಗೆ ಗೃಹ ಪ್ರವೇಶಕ್ಕಾಗಿ ಮಧ್ಯಾಹ್ನ 1 ಗಂಟೆಗೆ ಹೋಗಿರುತ್ತೇವೆ. ಗೃಹ ಪ್ರವೇಶ ಮುಗಿಸಿಕೊಂಡು ನಾವು ವಾಪಸ್ ಬರುವಾಗ ಬಸ್ ನಿಲ್ದಾಣವು 2 ಮಾರ್ ದೂರ ಇರುವಾಗ ಒಂದು ಬಿಳಿ ಬಣ್ಣದ ಕಾರ್ ಹಿಂದೆಯಿಂದ ಬಂದು ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತದೆ. ಕಾರ ಹಿಂದೆಯಿಂದ ನನ್ನ ಬಲಗಾಲಿನ ಮೇಲೆ ಅದರ ಮುಂದಿನ ಗಾಲಿ ಹಾಯ್ದಿದ್ದುತ್ತದೆ. ಸದರಿ ವಾಹನದ ಚಾಲಕ ತನ್ನ ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದಿರುತ್ತಾನೆ. ಅಪಘಾತದಲ್ಲಿ ನನ್ನ ಕೈ, ಕಾಲು, ಮೊಣಕೈಗೆ ಪೆಟ್ಟಾಗಿ ನಂತರ ನಮ್ಮನ್ನು ನಂತರ ಆ್ಯಂಬಲೇನ್ಸ ಮೂಲಕ ವಿಜಯಪುರದ

ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನ್ನನ್ನು ಆಸ್ಪತ್ರೆಗೆ ನನ್ನ ತಮ್ಮ ಅಳಿಯ ಕರೆದುಕೊಂಡು ಹೋಗಿರುತ್ತಾರೆ. ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಆತನ ಹೆಸರು ನನಗೆ ಗೊತ್ತಿಲ್ಲ. ಅಫಘಾತದ ವಿಷಯವಾಗಿ ಪೋಲಿಸರು ನನ್ನ ವಿಚಾರಣೆ ಮಾಡಿರುತ್ತಾರೆ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ನಾವು ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ ಬರುವಾಗ ಸಾಯಂಕಾಲ 4.30 ಗಂಟೆ ಆಗಿದ್ದು ನಮಗೆ ಅಪಘಾತಪಡಿಸಿದೇ ಎನ್ನಲಾದ ವಾಹನ ನಂಬರ ಕೆಎ/28/4186 ಅಂತಾ ಇತ್ತು ಎಂದರೆ ಸಾಕ್ಷಿ ನಂತರದಲ್ಲಿ ಗೊತ್ತಾಗಿದೆ ಎಂದು ನುಡಿದಿರುತ್ತಾರೆ. ನಮ್ಮನ್ನು ಚಿಕಿತ್ಸೆಗಾಗಿ ಚಿರಾಗ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಾನು ಠಾಣೆಗೆ ಹೋದಾಗ ಅಪಘಾತಪಡಿಸಿದ ವಾಹನದ ಚಾಲಕನ ಹೆಸರು ಮಲ್ಲಿಕಾರ್ಜುನ ಬಿರಾದಾರ ಎಂದು ಗೊತ್ತಾಗಿದೆ ಎಂದರೆ ಸರಿ. ನ್ಯಾಯಾಲಯದ ಇರುವ ತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಆರೋಪಿ ಅಪಘಾತಪಡಿಸಿದ ಬಗ್ಗೆ ಪೋಲಿಸರು ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ನನ್ನ ಕಾಲಿಗೆ ಭಾರಿ ಗಾಯ ಆಗಿತ್ತು ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಜಿ ಎನ್ ವಕೀಲರಿಂದ**

ಅಪಘಾತವಾದ ದಿನದಂದು ದೇವರ ಹಿಪ್ಪರಗಿಗೆ ಗೃಹ ಪ್ರವೇಶಕ್ಕೆ ಹೋಗಿದ್ದೆವು. ದೇವರ ಹಿಪ್ಪರಗಿ ಬಸ್ ನಿಲ್ದಾಣದಲ್ಲಿ ಜನ ದಟ್ಟಣ ವಾಹನ ದಟ್ಟಣೆ ಹೆಚ್ಚಾಗಿದ್ದು ಅಲ್ಲಿ ಹಣ್ಣಿನ ಅಂಗಡಿಗಳು ರಸ್ತೆ ಮೇಲೆ ಇರುತ್ತವೆ ಎಂದರೆ ಸರಿ. ಹಾಗಾಗಿ ಸಾಮಾನ್ಯವಾಗಿ

ವಾಹನಗಳು ಜೋರಾಗಿ ಹೋಗುವುದಿಲ್ಲ ಎಂದರೆ ಹೌದು ಎಂದು ನುಡಿದಿರುತ್ತಾರೆ. ಸದರಿ ದಿನದಂದು ನಾನು ದಾಬಾದಲ್ಲಿ ಊಟ ಮಾಡಿ ಮಧ್ಯಪಾನೆ ಸೇವೆ ಮಾಡಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನೇ ಮಧ್ಯಪಾನ ಸೇವನೆ ಮಾಡಿದ್ದರಿಂದ ರಸ್ತೆ ಮೇಲೆ ಹೋಗುವಾಗ ಕಾಲು ಜಾರಿ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ನಿರ್ಲಕ್ಷ್ಯತನದಿಂದ ನಾನೇ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಕಾರಿನ ಚಾಲಕನ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ನಾನು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಹಣವನ್ನು ಪಡೆಯಲು ಸಲುವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.